**ದಿನಾಂಕ 04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ಎಂ ರೈ ವಕೀಲರಿಂದಃ**

ಅಪಘಾತದ ಸಂದರ್ಭದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ. ಅಪಘಾತದ ಸಮಯದಲ್ಲಿ ನನ್ನ ಮಗ ಬೈಕ್ ಚಲಾಯಿಸುತ್ತಿದ್ದ ಎಂದರೆ ಸರಿ. ಆತನು ಬೈಕ್ ಚಲಾಯಿಸಲು ಚಲಾನೆ ಪರಿವಾನಿಗೆ ಇದ್ದ ಬಗ್ಗೆ ಚಾಲನಾ ಪರಿವಾನಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನನ್ನ ವಕೀಲರ ಮೂಲಕ ನ್ಯಾಯಾಲಕ್ಕೆ ಹಾಜರು ಪಡಿಸಿರುವ ದಾಖಲಾತಿಗಳು ಸರಿ ಇರುತ್ತವೆ. ನಿಪಿ-7 ರಂತೆ ಕಾಣಿಸಿರುವಂತೆ ನನ್ನ ಮಗನ ತಪ್ಪಿ ನಿಂದ ಅಪಘಾತ ಆಗಿರುವುದರಿಂದ ನಾನು ಯಾವುದೇ ಪರಿಹಾರ ಕೇಳಲು ಮತ್ತು ಪಡಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ವಾಹನ ಚಲಾಯಿಸಲು ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಚಲಾಯಿಸುತ್ತಿದ್ದೆ ವಾಹನಕ್ಕೆ ವಿಮೇ ಇರಲಪಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ವಾಹನಕ್ಕೆ ವಿಮೇ ಇಲ್ಲದೆ ಇದ್ದುದ್ದರಿಂದ ಸುಳ್ಳು ಪ್ರಕರಣವನ್ನು 2 ನೇ ಎದುದಾರರು ವಿರುದ್ಧ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಅಪಘಾತದ ಸಂದರ್ಬದಲ್ಲಿ ಯಾವುದೇ ಪೈಟಿಂಗ್ ಕೆಲಸ ಮಾಡುತ್ತಿರಲಲ್ಲ ಎಂದರೆನಿ ಸರಿಯಲ್ಲ. ನನ್ನ ಮಗನಿಗೆ ಅಪಘಾತದ ಸವಯದಲ್ಲಿ 20,000/- ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಶವ ಸಂಸ್ಕಾರಕ್ಕೆ ಒಡಾಟಕ್ಕೆ ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಅರ್ಜಿದಾರರು ಮೃತ ಪಟ್ಟ ನನ್ನ ಮಗನ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ.

ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ದಿನಕ್ಕೆ 600-700 ಸಂಪಾದನೆ ಮಾಡುತ್ತೇನೆ. ನನಗೆ ಪ್ರತಿದಿನ ಕೆಲಸ ಸಿಗುವುದಿಲ್ಲ. ನನ್ನ ಸಂಸಾರಕ್ಕೆ ಸಂಬಂಧಪಟ್ಟಂತೆ ಪಡಿತರ ಚೀಟಿ ಇರುತ್ತದೆ. ಅಪಘಾತ ನನ್ನ ಮಗನ ತಪ್ಪಿ ನಿಂದ ಆಗಿರುವುದರಿಂದ ಯಾವುದೇ ಪರಿಹಾರವನ್ನು ಪಡೆಯಲು ನಾವು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.